ರಾಯಚೂರು ಜಿಲ್ಲೆಯಲ್ಲಿ ಸರ್ವೆ ಕಾರ್ಯದ ವಿಳಂಬ

22(350) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿ ಪಹಣಿ, ಪೋಡಿ ಹಾಗೂ ಹಕ್ಕು ಬದಲಾವಣೆ ಮತ್ತು ಸರ್ವೆ ಕಾರ್ಯಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು; ಈ ವಿಳಂಬವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಕಾರ್ಯಗಳನ್ನು ನಿರ್ವಹಿಸಲು ಸಮರ್ಪಕವಾದ ನೌಕರರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಸಿಂಧನೂರು ತಾಲ್ಲೂಕಿನಲ್ಲಿ ಬಾಕಿ ಇರುವ ಪಹಣಿ, ಪೋಡಿಗಳ ಹಾಗೂ ಹಕ್ಕು ಬದಲಾವಣೆಗಳ ಮತ್ತು ಸರ್ವೆ ಕಾರ್ಯಗಳ ಅರ್ಜಿದಾರರ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ನೀಡುವುದು);

ಊ) ಪಹಣಿ ಪೋಡಿ ಹಾಗೂ ಹಕ್ಕು ಬದಲಾವಣೆ ಮತ್ತು ಸರ್ವೆ ಕಾರ್ಯಗಳು ವಿಳಂಬವಾಗಲು ಕಾರಣಗಳೇನು;

ಋ) ವಿಳಂಬಕ್ಕೆ ಕಾರಣವಾಗಿರುವ ನೌಕರರ ಮೇಲೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ಬಂದಿದೆ.

ಆ) ರಾಯಚೂರು ಜಿಲ್ಲೆಯಲ್ಲಿ ಭೂದಾಖಲೆಗಳ ನಿರ್ವಹಣೆ ಉಳಿದ ಜಿಲ್ಲೆಗಳಂತೆ ಸಿಬ್ಬಂದಿ ಕೊರತೆ, ಪಹಣಿ ಮತ್ತು ಆಕಾರಬಂದ್ ವಿಸ್ತೀರ್ಣಕ್ಕೆ ತಾಳೆ ಇಲ್ಲದೇ ಇರುವುದು, ಅಸ್ತಿ ವಿಂಗಡಣೆ, ಭೂಸ್ವಾಧೀನ, ಭೂಮಂಜೂರಾತಿ ಹಾಗೂ ಭೂಸುಧಾರಣೆ ತೀರ್ಮಾನಗಳಿಂದ ಬಹುಮಾಲೀಕತ್ವದ ಪಹಣಿಗಳಾಗಿವೆ. ಪಹಣಿ ತಿದ್ದುಪಡಿ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಸರ್ವೆ ಕಾರ್ಯ ನಡೆಸಬೇಕಾಗಿರುತ್ತದೆ.

ತತ್ಕಾಲ್ ಪೋಡಿಯಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ
(ಗ್ರಾಮವಾರು)

ಕ್ರ.ಸಂ.	ಹೋಬಳಿ	ಗ್ರಾಮ	ಬಾಕಿ ಇರುವ ಪ್ರಕರಣಗಳ ಸಂಖ್ಯೆ
1	2	3	4
1	ಜವಳಗೇರಾ	ಅಮರಾಪೂರ ಕೆ.ಹೆಚ್.	1
2	ಹುಡಾ	ಅರಳಹಳ್ಳಿ (ಡಿ)	2
3	ಬಾದರ್ಲಿ	ಅಲಬನೂರ	1
4	ಬಾದರ್ಲಿ	ಉಪ್ಪಳ	1
5	ಕುರ್ವಿಹಾಳ	ಉಮಲೂಟಿ	1
6	ಕುರ್ವಿಹಾಳ	ಕಲ್ಮಂಗಿ	1
7	ಕುನ್ನಟಗಿ	ಕಲ್ಲೂರು	1
8	ಕುನ್ನಟಗಿ	ಕುನ್ನಟಗಿ	2
9	ಸಿಂಧನೂರ	ಕೊಂಗನಹಟ್ಟಿ (ಡಿ)	2
10	ಗೋರೆಬಾಳ	ಕೊಂತನೂರ (ಡಿ)	2
11	ಗುಡದೂರ	ಕೋಳಬಾಳ	1
12	ಗುಂಜಳ್ಳಿ	ಗುಂಜಳ್ಳಿ	1
13	ಗೋರಬಾಳ	ಗೊರೇಬಾಳ	1
14	ಬಳೆಗಾನೂರ	ಗೌಡನಭಾವಿ	1
15	ಗೋರೆಬಾಳ	ಚನ್ನಹಳ್ಳಿ	8
16	ಗುಡದೂರ	ಚಿಕ್ಕಕಡಬೂರ	1
17	ಜಾಲಿಹಾಳ	ಜಾಲಿಹಾಳ	2
18	ತುರ್ವಿಹಾಳ	ತುರ್ವಿಹಾಳ	4
19	ಜವಳಗೇರಾ	ದಿಬ್ಬನಖೇಡ (ಡಿ)	1

1	2	3	4
20	ಸಾಲ್ಗುಂದಾ	ಧಡೇನೂಗೂರು	3
21	ಗುಡದೂರ	ನಂಜಲದಿನ್ನಿ	2
22	ವಲ್ಕಂದಿನ್ನಿ	ಬನ್ನಿಗನೂರ	2
23	ಕುನ್ನಟಗಿ	ಬಸಾಪೂರ	1
24	ಜಾಲಿಹಾಳ	ಬಸಾಪೂರ (ಕೆ)	1
25	ಬಳಗಾನೂರ	ಬಳಗಾನೂರ	3
26	ತುರ್ವಿಹಾಳ	ಬುಕ್ಕನಹಟ್ಟಿ	2
27	ಬಳಗಾನೂರ	ಬೆಂಡ್ಲಟ್ಟಿ (ಡಿ)	1
28	ತುರ್ವಿಹಾಳ	ಭೋಗಾಪುರ	1
29	ಜವಳಗೇರಾ	ಮಲದಿನ್ನಿ (ಡಿ)	2
30	ಗುಂಜಳ್ಳಿ	ಮಾಟೂರು	1
31	ಬಾದರ್ಲಿ	ಮಾಡಶಿರವಾರ	1
32	ಗೇರೆಬಾಳ	ಮಾವಿನಮಾಡು	2
33	ಗುಡದೂರ	ಮೇರನಾಳ	1
34	ಹುಡಾ	ರಚಡಕುಂದಾ	1
35	ವಲ್ಕಂದಿನ್ನಿ	ರಾಗಲಪವಿ	2
36	ದಲ್ಕಂದಿನ್ನಿ	ರಾಮತ್ನಾಳ	1
37	ಗುಂಜಳ್ಳಿ	ವಿರುಪಾಪುರ	1
38	ತುರ್ವಿಹಾಳ	ವೀರಾಪುರ	2
39	ಸಾಲ್ಗುಂದಾ	ಸಾಲ್ಗುಂದಾ	2
40	ಗೋರೆಬಾಳ	ಸಾಸಲಮರಿ	2
41	ಹುಡಾ	ಸಿಂಗಾಪುರ	2
42	ಸಿಂಧನೂರ	ಸಿಂಧನೂರ	11

1	2	3	4
43	ಗುಡದೂರ	ಸುಂಕನೂರು	1
44	ಜವಳಗೇರಾ	ಸುಲ್ತಾನಪುರ	1
45	ಜಾಲಿಹಾಳ	ಹನುಮಾಪೂರ	2
46	ಹೆಡಗಿನಾಳ	ಹೆಡಗಿನಾಳ	2
47	ಗುಡದೂರ	ಹೆಡಗಿನಾಳ (ಡಿ)	1
48	ಸಿಂಧನೂರ	ಹೊಸಳ್ಳಿ (ಇ)	2
49	ಜಾಲಿಹಾಳ	ಹೊಸಳ್ಳಿ (ಇ)	1
			90

ಸಿಂಧನೂರು ತಾಲ್ಲೂಕಿನಲ್ಲಿ 11ಇ ನಕ್ಷೆಗಾಗಿ ಅರ್ಜಿಗಳ ಸಂಖ್ಯೆ
(ಗ್ರಾಮವಾರು)

ಕ್ರ.ಸಂ.	ಹೋಬಳಿ	ಗ್ರಾಮ	ಬಾಕಿ ಇರುವ ಪ್ರಕರಣಗಳ ಸಂಖ್ಯೆ
1	2	3	4
1	ಕುನ್ನಟಗಿ	ಉಪ್ಪಲದೊಡ್ಡಿ (ಡಿ)	1
2	ಕುನ್ನಟಗಿ	ಎಲೆಕೂಡ್ಲಿಗಿ	13
3	ಕುನ್ನಟಗಿ	ಕಲ್ಲೂರು	18
4	ಕುನ್ನಟಗಿ	ಕುನ್ನಟಗಿ	26
5	ಕುನ್ನಟಗಿ	ಜಿರತನಾಳ	16
6	ಕುನ್ನಟಗಿ	ತಿಪ್ಪನಹಟ್ಟಿ	10
7	ಕುನ್ನಟಗಿ	ದೇವರಗುಡಿ	31
8	ಕುನ್ನಟಗಿ	ಪಗಡದಿನ್ನಿ	28
9	ಕುನ್ನಟಗಿ	ಬಸಾಪೂರ	12
10	ಕುನ್ನಟಗಿ	ಬೊಮ್ಮನಾಳ ಇ.ಜಿ.	10

1	2	3	4
11	ಕುನ್ನಟಗಿ	ಭೂತಲದಿನ್ನಿ	20
12	ಕುನ್ನಟಗಿ	ಮಂಗನಾಳ	2
13	ಕುನ್ನಟಗಿ	ಮಲ್ಲಪೂರ	20
14	ಕುನ್ನಟಗಿ	ಮುಳ್ಳೂರ (ಇ.ಜಿ.)	17
15	ಕುನ್ನಟಗಿ	ಹಾರಾಪೂರ	2
16	ಗುಂಜಳ್ಳಿ	ಕಾನಿಗಿನಹಾಳ	13
17	ಗುಂಜಳ್ಳಿ	ಉಪ್ಪಲದೊಡ್ಡಿ	6
18	ಗುಂಜಳ್ಳಿ	ಕುರುಕುಂದಾ	30
19	ಗುಂಜಳ್ಳಿ	ಗುಂಜಳ್ಳಿ	26
20	ಗುಂಜಳ್ಳಿ	ತಿಡಿಗೋಳ	29
21	ಗುಂಜಳ್ಳಿ	ಸಿಡಿಗೋಳ	13
22	ಗುಂಜಳ್ಳಿ	ಬಪ್ಪೂರ	10
23	ಗುಂಜಳ್ಳಿ	ಬಾಗಾಪೂರ	2
24	ಗುಂಜಳ್ಳಿ	ಮಾಟೂರು	22
25	ಗುಂಜಳ್ಳಿ	ವಿರುಪಾಪುರ	75
26	ಗುಂಜಳ್ಳಿ	ಹೂಕ್ಕಾಣಿ	17
27	ಗುಂಜಳ್ಳಿ	ಉದ್ಬಾಳ (ಯು)	16
28	ಗುಂಜಳ್ಳಿ	ಕಣ್ಣೂರ	45
29	ಗುಂಜಳ್ಳಿ	ಕೋಳಬಾಳ	24
30	ಗುಂಜಳ್ಳಿ	ಕ್ಯಾತನಹಟ್ಟಿ	13
31	ಗುಂಜಳ್ಳಿ	ಗುಡಗಲದಿನ್ನಿ	11
32	ಗುಂಜಳ್ಳಿ	ಗುಡದೂರ	8
33	ಗುಡದೂರ	ಗೋನಾಳ	19

1	2	3	4
34	ಗುಡದೂರ	ಐಕ್ಕಕಡಬೂ	34
35	ಗುಡದೂರ	ಚಲ್ಲಿಹಟ್ಟಿ (ಡಿ)	7
36	ಗುಡದೂರ	ಜೋಗಲದಿನ್ನಿ (ಡಿ)	1
37	ಗುಡದೂರ	ದೀನಸಮುದ್ರ	9
38	ಗುಡದೂರ	ನಂಜಲದಿನ್ನಿ	16
39	ಗುಡದೂರ	ಪರಾಪೂರ	8
40	ಗುಡದೂರ	ಪುಟ್ಟನಾಳ (ಡಿ)	7
41	ಗುಡದೂರ	ಬೈರಂಗೊಂಡಲ್ (ಡಿ)	1
42	ಗುಡದೂರ	ಮುದ್ದಾಪೂರ	20
43	ಗುಡದೂರ	ಮೇರನಾಳ	12
44	ಗುಡದೂರ	ರಂಗಾಪೂರ	8
45	ಗುಡದೂರ	ಸುಂಕನೂರು	17
46	ಗುಡದೂರ	ಹಂಚಿನಾಳ (ಯು)	22
47	ಗುಡದೂರ	ಹಂಚಿನಾಳ	13
48	ಗುಡದೂರ	ಹಸಮತಲ	9
49	ಗುಡದೂರ	ಹೆಡಗಿಬಾಳ (ಡಿ)	10
50	ಗೋರಬಾಳ	ಕೊಂಡನೂರ (ಡಿ)	25
51	ಗೋರಬಾಳ	ಗೊರೆಬಾಳ	74
52	ಗೋರಬಾಳ	ಚನ್ನಹಳ್ಳಿ	62
53	ಗೋರಬಾಳ	ಮಲ್ಲಾಪುರ	25
54	ಗೋರಬಾಳ	ಮಾವಿನಮಾಡು	15
55	ಗೋರಬಾಳ	ಸಾಸಲಮರಿ	32
56	ಗೋರಬಾಳ	ಸಿದ್ರಾಂಪುರ	39

1	2	3	4
57	ಗೋರಬಾಳ	ಹಟ್ಟಿ	31
58	ಜವಳಗೇರಾ	ಅಮರಾಪೂರ ಕೆ.ಹೆಚ್.	24
59	ಜವಳಗೇರಾ	ಕನಕರೆಡ್ಡಿ (ಡಿ)	1
60	ಜವಳಗೇರಾ	ಜಂಗಮರ ಹಟ್ಟಿ (ಅ)	12
61	ಜವಳಗೇರಾ	ಜಂಗಮರ ಹಟ್ಟಿ (ಡಿ)	7
62	ಜವಳಗೇರಾ	ಜವಳಗೇರಾ	26
63	ಜವಳಗೇರಾ	ತುರಕಟ್ಟಿ (ಡಿ)	11
64	ಜವಳಗೇರಾ	ದಿದ್ದಗಿ	19
65	ಜವಳಗೇರಾ	ದಿಬ್ಬನಖೇಡ (ಡಿ)	8
66	ಜವಳಗೇರಾ	ಮ್ಯಲದಿನ್ನಿ (ಡಿ)	4
67	ಜವಳಗೇರಾ	ಲೋಕನ್ನನದೊಡ್ಡಿ	3
68	ಜವಳಗೇರಾ	ಶಿರನಗುಡಿ	6
69	ಜವಳಗೇರಾ	ಶಿವಜವಳಗೇರಾ (ಡಿ)	10
70	ಜವಳಗೇರಾ	ಸುಲ್ತಾನಪೂರ	42
71	ಜಾಲಿಹಾಳ	ಗಾಂಧಿನಗರ	22
72	ಜಾಲಿಹಾಳ	ಜಂಬುನಾಥನಹಳ್ಳಿ	9
73	ಜಾಲಿಹಾಳ	ಜಾಲಿಹಾಳ	46
74	ಜಾಲಿಹಾಳ	ಬಸಾಪೂರ (ಕ)	41
75	ಜಾಲಿಹಾಳ	ಹಂಚಿನಾಳ (ಕ)	54
76	ಜಾಲಿಹಾಳ	ಹನುಮಾಪೂರ	21
77	ಜಾಲಿಹಾಳ	ಹೊಸಳ್ಳಿ (ಕ)	52
78	ತುರ್ವಿಹಾಳ	ಉಮಲೂಟಿ	7

1	2	3	4
79	ತುರ್ವಿಹಾಳ	ಕರಸಚಿಲ್ಮಿ	3
80	ತುರ್ವಿಹಾಳ	ಕಲ್ಮಂಗಿ	43
81	ತುರ್ವಿಹಾಳ	ಗದ್ರಟಗಿ	12
82	ತುರ್ವಿಹಾಳ	ಗುಂಡ	16
83	ತುರ್ವಿಹಾಳ	ಗುಡಿಹಾಳ	7
84	ತುರ್ವಿಹಾಳ	ಗೂರಲೂಟಿ	16
85	ತುರ್ವಿಹಾಳ	ಚಿಕ್ಕಭೇಗಿರ್	17
86	ತುರ್ವಿಹಾಳ	ತುರ್ವಿಹಾಳ	124
87	ತುರ್ವಿಹಾಳ	ಬುಕ್ಕನಹಟ್ಟಿ	9
88	ತುರ್ವಿಹಾಳ	ಬೊಮ್ಮನಾಳ (ಉ)	5
89	ತುರ್ವಿಹಾಳ	ಭೋಗಾಪುರ	2
90	ತುರ್ವಿಹಾಳ	ಮಹಾಂಪೂರ	2
91	ತುರ್ವಿಹಾಳ	ಮುಳ್ಳೂರ (ಉ)	15
92	ತುರ್ವಿಹಾಳ	ರತ್ನಾಪುರ	7
93	ತುರ್ವಿಹಾಳ	ವೀರಾಪುರ	14
94	ತುರ್ವಿಹಾಳ	ಸಂಕನಾಳ	10
95	ತುರ್ವಿಹಾಳ	ಹತ್ತಿಗುಡ್ಡ	1
96	ತುರ್ವಿಹಾಳ	ಹಿರೇಭೇಗಿರ್	17
97	ತುರ್ವಿಹಾಳ	ಹೊಗರನಾಳ	41
98	ಬಗಾನೂರ	ಕೊಂಗನಾಯಕನ ದೊಡ್ಡ	2
99	ಬಗಾನೂರ	ಗೋವಿಂದನಾಯಕನ ದೊಡ್ಡ	8

1	2	3	4
100	ಬಗಾನೂರ	ಗೌಡನಭಾವಿ	9
101	ಬಗಾನೂರ	ಜಾಲದಾಡಗಿ	23
102	ಬಗಾನೂರ	ಜುಜಲಾಪೂರ (ಡಿ)	1
103	ಬಗಾನೂರ	ನಾಗನಾಸ್ತಿ (ಡಿ)	3
104	ಬಗಾನೂರ	ಬಳಗಾನೂರ	114
105	ಬಗಾನೂರ	ಬುದ್ದಿನ್ನಿ	9
106	ಬಗಾನೂರ	ಬೆಂಡ್ಲಟ್ಟಿ (ಡಿ)	3
107	ಬಗಾನೂರ	ಬೆಳ್ಳಿಗನೂರು	12
108	ಬಗಾನೂರ	ಮಸ್ಕಹಟ್ಟಿ (ಡಿ)	8
109	ಬಗಾನೂರ	ಶಂಕರಬಂಡಿ (ಡಿ)	4
110	ಬಗಾನೂರ	ಹುಲ್ಲೂರು	18
111	ಬಾದರ್ಲಿ	ಅಲಬನೂರ	19
112	ಬಾದರ್ಲಿ	ಉದ್ದಾಳ (ಜಿ)	8
113	ಬಾದರ್ಲಿ	ಉಪ್ಪಳ	64
114	ಬಾದರ್ಲಿ	ಕನ್ನಾರಿ	29
115	ಬಾದರ್ಲಿ	ಕಾತರಕಿ (ಡಿ)	15
116	ಬಾದರ್ಲಿ	ಗೊಣ್ಣಿಗನೂರು.	9
117	ಬಾದರ್ಲಿ	ಗೋಮಸಿ	24
118	ಬಾದರ್ಲಿ	ಪೂಲದಿನ್ನಿ (ಡಿ)	2
119	ಬಾದರ್ಲಿ	ಬಾದರ್ಲಿ	20
120	ಬಾದರ್ಲಿ	ಬೆಳಗುಕಿ	17
121	ಬಾದರ್ಲಿ	ಮಲದಿನ್ನಿ (ಡಿ)	22
122	ಬಾದರ್ಲಿ	ಮಾಡಶಿರವಾರ	14

1	2	3	4
123	ಬಾದರ್ಲಿ	ಲಿಂಗಾಪೂರ (ಡಿ)	2
124	ಬಾದರ್ಲಿ	ವೆಂಗಳಾಪೂರ (ಡಿ)	3
125	ಬಾದರ್ಲಿ	ಹರೇಟನೂರು	24
126	ಬಾದರ್ಲಿ	ಹರೇಟನೂರು	1
127	ವಲ್ಕಂದಿನ್ನಿ	ಗೋನಧಾರ	18
128	ವಲ್ಕಂದಿನ್ನಿ	ತಿಮ್ಮಾಪೂರ	15
129	ವಲ್ಕಂದಿನ್ನಿ	ಧುಮತಿ	15
130	ವಲ್ಕಂದಿನ್ನಿ	ಪುಲ್ಲದಿನ್ನಿ	11
131	ವಲ್ಕಂದಿನ್ನಿ	ಬನ್ನಿಗನೂರ	40
132	ವಲ್ಕಂದಿನ್ನಿ	ಮಂದಾಹೊಸೂರ (ಡಿ)	3
133	ವಲ್ಕಂದಿನ್ನಿ	ಯಾಪಲಡವಿ	16
134	ವಲ್ಕಂದಿನ್ನಿ	ರಾಗಲಡವಿ	21
135	ವಲ್ಕಂದಿನ್ನಿ	ರಾಮತ್ನಾಳ	25
136	ವಲ್ಕಂದಿನ್ನಿ	ವಲ್ಕಂದಿನ್ನಿ	9
137	ವಲ್ಕಂದಿನ್ನಿ	ರಾಮತ್ನಾಳ	25
138	ವಲ್ಕಂದಿನ್ನಿ	ವಲ್ಕಂದಿನ್ನಿ	9
139	ಸಾಲ್ಗುಂದಾ	ಕಗ್ಗಲ್ (ಡಿ)	9
140	ಸಾಲ್ಗುಂದಾ	ಕೆಂಗಲ್	13
141	ಸಾಲ್ಗುಂದಾ	ಚಿಂಚೇರಿ (ಡಿ)	24
142	ಸಾಲ್ಗುಂದಾ	ಧಢೇಸೂಗೂರು	49
143	ಸಾಲ್ಗುಂದಾ	ನಂದಿಕಲ್ಲು (ಡಿ)	14
144	ಸಾಲ್ಗುಂದಾ	ಬಸ್ಲಾಪುರ (ಡಿ)	5

1	2	3	4
145	ಸಾಲ್ಗುಂದಾ	ಬೂದಿವಾಳ	14
146	ಸಾಲ್ಗುಂದಾ	ರಂಗದಳ್ಳಿ (ಡಿ)	8
147	ಸಾಲ್ಗುಂದಾ	ಸಾಲ್ಗುಂದಾ	90
148	ಸಾಲ್ಗುಂದಾ	ಸೋಮಲಾಪೂರ	29
149	ಸಾಲ್ಗುಂದಾ	ಅಮರಾಪೂರ	15
150	ಸಾಲ್ಗುಂದಾ	ಏಳರಾಗಿ (ಡಿ)	18
151	ಸಾಲ್ಗುಂದಾ	ಕೊಂಗನಹಟ್ಟಿ (ಡಿ)	26
152	ಸಾಲ್ಗುಂದಾ	ಜೋಳದರಾಸಿ (ಡಿ)	16
153	ಸಾಲ್ಗುಂದಾ	ಸನಹಳ್ಳಿ	14
154	ಸಾಲ್ಗುಂದಾ	ಸಿಂಧನೂರ	221
155	ಸಾಲ್ಗುಂದಾ	ಸಿಂಧನೂರ (ಆರ್‌ಹೆಚ್1)	2
156	ಸಾಲ್ಗುಂದಾ	ಸಿಂಧನೂರ (ಆರ್‌ಹೆಚ್2)	1
157	ಸಾಲ್ಗುಂದಾ	ಸಿದ್ದಮರ (ಡಿ)	8
158	ಸಾಲ್ಗುಂದಾ	ಹೊಸಲಾಪೂರ	11
159	ಸಾಲ್ಗುಂದಾ	ಹೊಸಳ್ಳಿ (ಇ)	36
160	ಹುಡಾ	ಅರಳಹಳ್ಳಿ (ಡಿ)	14
161	ಹುಡಾ	ಕುರ್ತುಕೋಟೆ (ಡಿ)	3
162	ಹುಡಾ	ಗೊಬ್ಬರಕಲ್	24
163	ಹುಡಾ	ಮುಕ್ಕುಂದಾ	64
164	ಹುಡಾ	ರದಡಕುಂದಾ	66
165	ಹುಡಾ	ಸಿಂಗಾಪುರ	52

1	2	3	4
166	ಹುಡಾ	ಹುಡಾ	15
167	ಹೆಡಗಿನಾಳ	ಆಯನೂರ	7
168	ಹೆಡಗಿನಾಳ	ಗಿಣಿವಾರ	18
169	ಹೆಡಗಿನಾಳ	ಜಿಂತಮಾನದೊಡ್ಡಿ	7
170	ಹೆಡಗಿನಾಳ	ಚಿತ್ರಾಳಿ	2
171	ಹೆಡಗಿನಾಳ	ಪುಲಮೇಶ್ವರಿದಿನ್ನಿ	20
172	ಹೆಡಗಿನಾಳ	ಯದ್ದಲದೊಡ್ಡಿ	34
173	ಹೆಡಗಿನಾಳ	ವಳಬಳ್ಳಾರಿ	27
174	ಹೆಡಗಿನಾಳ	ಹುಲಗುಂಚಿ	9
175	ಹೆಡಗಿನಾಳ	ಹೆಡಗಿನಾಳ	28

ಶ್ರೀ ನಾಡಗೌಡ ವೆಂಕಟರಾವ್ : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು ಕಳೆದ ಅಧಿವೇಶನದಲ್ಲೂ ಕೇಳಿದ್ದೆ. ಆದರೆ, ಇದುವರೆವಿಗೂ ಕೂಡ ಅಲ್ಲಿ ಯಾವುದೇ ಇಂಪ್ರೂವ್‌ಮೆಂಟ್ ಆಗುತ್ತಿಲ್ಲ. ಇವರು ಉತ್ತರದಲ್ಲಿ, ಪಹಣಿ ಮತ್ತು ಆಕಾರಬಂದ್ ಏಸ್ತೀರ್ಣಕ್ಕೆ ತಾಳೆ ಇಲ್ಲದೇ ಇರುವುದರಿಂದ, ಆಸ್ತಿ ವಿಂಗ 'ಡಣೆ, ಭೂಸ್ವಾಧೀನ, ಭೂಮಂಜೂರಾತಿ ಹಾಗೂ ಭೂಸುಧಾರಣೆ ತೀರ್ಮಾನಗ 'ಳಿಂದ ಬಹುಮಾಲೀಕತ್ವದ ಪಹಣಿಗಳಾಗಿವೆ. ಪಹಣಿ ತಿದ್ದುಪಡಿ ಕಾರ್ಯವನ್ನು ಪೂರ್ಣ ಗೊಳಿಸಿದ ನಂತರ ಸರ್ವೆ ಕಾರ್ಯ ನಡೆಸಬೇಕಾಗಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ನಮಗೆ ಏನಾಗುತ್ತದೆ ಎಂದರೆ, 2009 ನೇ ಇಸ್ವಿಯಲ್ಲಿ ಕೊಟ್ಟರೂ ಇದುವರೆವಿಗೂ ಪಹಣಿಗಳು ಬದಲಾವಣೆಗಳಾಗುತ್ತಿಲ್ಲ. ತಂದೆ ಸತ್ತಿದ್ದಾನೆ ಮಗನಿಗೆ ಪಹಣಿ ಬೇಕು ಎಂದರೆ ಸಿಗುತ್ತಿಲ್ಲ. ಎಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ತಂದೆ ಸಾಲ ಮಾಡಿದ್ದ. ಆಗ ಸಾಲ ನೀನು ಕಟ್ಟಿಬಿಡು ನಿನ್ನ ಹೆಸರಿಗೆ ಪಹಣಿ ಕೊಡುತ್ತೇವೆಂದು ಮಗನಿಗೆ ಹೇಳಿದ್ದರು. ಅದರಂತೆ ಮಗ ಆ ಸಾಲವನ್ನು ಬ್ಯಾಂಕಿಗೆ ಕಟ್ಟಿದ್ದಾನೆ. ಈ ರೀತಿ ಹಣ ಕಟ್ಟಿ ಎರಡೂ ವರ್ಷಗಳಾದರೂ ಮಗನಿಗೆ ಹೆಸರಿಗೆ ಪಹಣಿ ಬದಲಾವಣೆಯಾಗುತ್ತಿಲ್ಲ. ಕೆಲವು ಜಮೀನುಗಳು ಖರೀದಿಯಾಗಿ ಒಂದು ವರ್ಷವಾದ ಮೇಲೆ ಪಹಣಿ ಬದಲಾವಣೆಯಾಗದೇ ಇರುವುದರಿಂದ ಅಲ್ಲಿ

ವ್ಯಾಜ್ಯ ಉಂಟಾಗಿದೆ. ಏಕೆಂದರೆ, ಭೂಮಿ ರೇಟ್ ಜಂಪ್ ಆಗಿರುವುದರಿಂದ ಅವರು ಕೊಡುತ್ತಿಲ್ಲ. ಹೀಗಾಗಿ ಅಲ್ಲಿ ಇನ್ನೂ ಮಾರಾಟವಾಗಿಲ್ಲ, ನಿನ್ನ ಹೆಸರಿಗೆ ಆಗಿಲ್ಲ. ನಾನು ಕೊಡಲ್ಲ ಎಂದು ಹೊಡೆದಾಡುತ್ತಿದ್ದಾರೆ. ಇಂಥ ಪರಿಸ್ಥಿತಿಗಳು ನಿರ್ಮಾಣವಾಗಿವೆ. ಬೇಕಾದರೆ ಈಗಲೇ ನನ್ನ ಪತ್ತಿರ ಇರುವ ಕೆಲವು ದಾಖಲೆಗಳನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ. 2009 ರಿಂದಲೂ ಪಹಣಿ ಬದಲಾವಣೆಯಾಗದಿರುವ ಕೇಸ್‌ಗಳಿವೆ ತಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತೇನೆ. ಹೀಗಾಗಿ ನಮಗೆ ಏನು ತೊಂದರೆಯಾಗಿದೆ ಎಂದರೆ, ಅಲ್ಲಿ ಸರ್ವೆ ಮಾಡುವುದಕ್ಕೆ ಅಧಿಕಾರಿಗಳಿಲ್ಲ. ಇದನ್ನು ಸರ್ಕಾರ ಕೂಡ ಒಪ್ಪಿದೆ. ನನ್ನ ಪ್ರಶ್ನೆಯಲ್ಲಿ ಈ ವಿಚಾರ ಕೇಳಿದಾಗ ಅದಕ್ಕೆ ಮಾನ್ಯ ಸಚಿವರು ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ, 2009-2010 ರಲ್ಲಿ ಕೆಲವು ಹುದ್ದೆಗಳನ್ನು ಭರ್ತಿ ಮಾಡಿದಿರಿ. ಆದರೆ, ರಾಯಚೂರು ಜಿಲ್ಲೆಯಲ್ಲಿ ಯಾವುದೇ ಹುದ್ದೆಯನ್ನು ತುಂಬಲಿಲ್ಲ. ಹೀಗಾಗಿ ಅಲ್ಲಿ ಇವತ್ತು ನನಗೆ ಬಂದಿರುವ ಮಾಹಿತಿ ಪ್ರಕಾರ, ರಾಯಚೂರು ಜಿಲ್ಲೆಯಲ್ಲಿ ಸುಮಾರು ಇಪ್ಪತ್ತುನಾಲ್ಕು ಹುದ್ದೆಗಳು ಖಾಲಿಯಿವೆ. ತಮ್ಮ ಉತ್ತರದಲ್ಲೂ ಕೂಡ ಹುದ್ದೆಗಳು ಖಾಲಿಯಿವೆ ಅದು ಕೂಡ ವಿಳಂಬವಾಗುವುದಕ್ಕೆ ಒಂದು ಕಾರಣ ಎಂದು ಹೇಳಿದ್ದೀರಿ. ಅಗತ್ಯಬಿದ್ದಲ್ಲಿ ಹೆಚ್ಚುವರಿ ಸಿಬ್ಬಂದಿಗೆ ಕೋರಿಕೆ ಸಲ್ಲಿಸುವುದಕ್ಕೆ ತಾವು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೀರಿ ಎನ್ನುವುದನ್ನೂ ಕೂಡ ಉತ್ತರದಲ್ಲಿ ಬರೆದಿದ್ದೀರಿ. ಜಿಲ್ಲಾಧಿಕಾರಿಗಳು ಈಗಾಗಲೇ ನಮಗೆ ಅವಶ್ಯಕತೆಯಿದೆ 11ಇ ನಕ್ಷೆ ವಿತರಣೆಗೆ ಬಹಳ ವಿಳಂಬವಾಗುತ್ತಿದೆ ಅದಕ್ಕೆ ಖಾಲಿಯಿರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಇಲ್ಲವೆ ಬೇರೆ ಜಿಲ್ಲೆಯಿಂದ ಭೂಮಾಪಕರನ್ನು ನಿಯೋಜನೆ ಮೇರೆಗೆ ನಿಯೋಜಿಸಲು ಈ ಮೂಲಕ ತಮ್ಮನ್ನು ಕೋರಿದೆ ಎಂದು ಅವರು ಮಾನ್ಯ ಕಂದಾಯ ಸಚಿವರಿಗೆ ಈಗಾಗಲೇ ಪತ್ರವನ್ನು ಕೂಡ ಬರೆದಿದ್ದಾರೆ. ನಮ್ಮಲ್ಲಿ ಏನಾಗಿದೆ ಎಂದರೆ, ಬೇರೆ ಜಿಲ್ಲೆಗಳು ಇರುವ ತರಹ ನಮ್ಮ ಜಿಲ್ಲೆಯಿಲ್ಲ. ಹೈದರಾಬಾದ್-ಕರ್ನಾಟಕದ ಜಿಲ್ಲೆಗಳಲ್ಲಿ 1964 ರೆಕಾರ್ಡ್ಸ್ ಟ್ಯಾಲಿಯಾಗುತ್ತಿಲ್ಲ. ಎಲ್ಲಿಯವರೆಗೆ ಟ್ಯಾಲಿಯಾಗುವುದಿಲ್ಲವೋ ಅಲ್ಲಿಯವರೆಗೆ ಪಹಣಿ ಮಾಡುವುದಕ್ಕಾಗುತ್ತಿಲ್ಲ. ನೀವು ಇದಕ್ಕೊಂದು ಸ್ಪೆಷಲ್ ಡ್ರೈವ್ ಮಾಡಿ 1964ರ ಎಲ್ಲಾ ರೆಕಾರ್ಡ್ಸ್‌ಗಳನ್ನು ಒಂದು ಸಾರಿ ಟ್ಯಾಲಿ ಮಾಡಿ ಸರಿಪಡಿಸಿದರೆ ಮಾತ್ರ ಇದು ಸರಿಹೋಗುತ್ತದೆ. ಇಲ್ಲಾಂದ್ರೆ ಅದು ಸರಿ ಹೋಗದೆ ಆಗುವುದೇ ಇಲ್ಲ.

ಅಧ್ಯಕ್ಷರು : ಆಯಿತು ಬಿಡಿ ನೀವು ಉತ್ತರ ಹೇಳಿ. ನೀವು ಪ್ರಶ್ನೆಯನ್ನೇ ಕೇಳುತ್ತಿಲ್ಲ.

ಶ್ರೀ ನಾಡಗೌಡ ವೆಂಕಟರಾವ್ : ಇನ್ನೊಂದು ತೊಂದರೆ ಏನೆಂದರೆ, ಅಲ್ಲಿ ಇರುವ ಪರಿಸ್ಥಿತಿಯನ್ನು ಹೇಳಿ ಬಿಡುತ್ತೇನೆ. ಒಂದು ನಿಮಿಷ ಸಮಯ ಕೊಡಿ ಸಾರ್..

ಶ್ರೀ ಸಿ.ಟಿ.ರವಿ : ಇದು ಇಡೀ ರಾಜ್ಯದಲ್ಲಿ ಈ ಸಮಸ್ಯೆಯಿದೆ.

ಶ್ರೀ ನಾಡಗೌಡ ವೆಂಕಟರಾವ್ : ಒಂದು ನಿಮಿಷ ನನಗೆ ಸಮಯ ಕೊಡಿ. ನಾನು ಮೊದಲು ನನ್ನ ಸಮಸ್ಯೆ ಹೇಳಿಬಿಡುತ್ತೇನೆ. ತಾವು ಆಮೇಲೆ ಹೇಳಿ. ಅಲ್ಲಿ ಏನು ತೊಂದರೆಯಾಗಿದೆ ಎಂದರೆ, ಈಗ ತಾವು ತಂದಿರುವ ಸಿಸ್ಟಂ ಬಗ್ಗೆ ತಕರಾರು ಇಲ್ಲ. ಮೊದಲು ಮ್ಯಾನ್ಯುಯಲ್‌ನಲ್ಲಿ ಆಗುತ್ತಿರುವ ಹಾಗೆ ಈಗ ಆಗುತ್ತಿಲ್ಲ. ಹೊಸ ಸಿಸ್ಟಂನಲ್ಲಿ ಯಾವುದಾದರೊಂದು ಅಬ್ಜೆಕ್ಷನ್ ಆಗಿ ಬಿಟ್ಟರೆ ಉಳಿದವೆಲ್ಲವೂ ಪೆಂಡಿಂಗ್ ಆಗುತ್ತವೆ. ಅದು ಸರಿ ಹೋಗುವವರೆವಿಗೂ ಕಂಪ್ಯೂಟರ್ ಉಳಿದವುಗಳನ್ನು ಅಕ್ಸೆಪ್ಟ್ ಮಾಡುವುದಿಲ್ಲ. ಎಲ್ಲವೂ ಪೆಂಡಿಂಗ್ ಆಗಿ ಬಿಡುತ್ತವೆ. ಹೀಗಾಗಿ 1964ರ ಎಲ್ಲಾ ದಾಖಲೆಗಳು ಸರಿಪಡಿಸದಿದ್ದರೆ ಎರಡು-ಮೂರು ವರ್ಷಗಳಾದರೂ ಪಹಣಿಗಳು ಬದಲಾವಣೆಯಾಗುತ್ತಿಲ್ಲ. ಇದು ಬಹುತೇಕ ಎಲ್ಲಾ ಕಡೆ ತೊಂದರೆಯಿರುವುದರಿಂದ ಎಲ್ಲರಿಗೂ ಗೊತ್ತಿದೆ. ಇಡೀ ರಾಜ್ಯದ ತುಂಬಾ ಈ ತೊಂದರೆಯಿರುವುದರಿಂದ ತಾವು ಇದಕ್ಕೆ ಚರ್ಚೆಗೆ ಅವಕಾಶ ಕೊಡ ಬೇಕಾಗುತ್ತದೆ. ಇದು ದೊಡ್ಡ ತೊಂದರೆಯಿದೆ.

ಅಧ್ಯಕ್ಷರು : ಬೇರೆ ರೂಪದಲ್ಲಿ ತನ್ನಿ.

ಶ್ರೀ ನಾಡಗೌಡ ವೆಂಕಟರಾವ್ : ಎಲ್ಲವನ್ನೂ ಬೇರೆ ರೂಪದಲ್ಲಿ ತನ್ನಿ ಎಂದರೆ ಯಾವ ರೂಪದಲ್ಲಿ ತಂದರೂ ಮತ್ತೆ ಅದೇ ಆಗುತ್ತದೆ. ದಯವಿಟ್ಟು ತಾವು ಹತ್ತು ನಿಮಿಷ ಅವಕಾಶ ಕೊಡಿ ಸಾರ್.

ಅಧ್ಯಕ್ಷರು : ಇದು ಪ್ರಶ್ನೋತ್ತರ ವೇಳೆಯಲ್ಲಿ ಆಗುವುದಿಲ್ಲ. ಪ್ಲೀಸ್ ಮುಗಿಸಿ.

ಶ್ರೀ ನಾಡಗೌಡ ವೆಂಕಟರಾವ್: ತಾವು ಇದಕ್ಕೆ ಏನಾದರೊಂದು ಪರಿಹಾರ ಮಾಡಿ ವ್ಯವಸ್ಥೆ ಮಾಡಬೇಕು. ಏಕೆಂದರೆ, ಇದು ಬಹಳ ಗೊಂದಲವಾಗಿದೆ. ದಯವಿಟ್ಟು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರನ್ನು ನಾನು ವಿನಂತಿ

ಮಾಡುವುದಿಷ್ಟೆ ನಮ್ಮ ಜಿಲ್ಲೆಯಲ್ಲಿ ಇದಕ್ಕೊಂದು ಸ್ಪೆಷಲ್ ಡ್ರೈವ್ ಮಾಡಿ ಇದನ್ನು ಸರಿಪಡಿಸುವುದಕ್ಕೆ ಏನಾದರೊಂದು ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಸಿ.ಟಿ.ರವಿ : ಇದು ಒಂದು ತಾಲ್ಲೂಕಿನ ಸಮಸ್ಯೆಯಲ್ಲ. ಇಡೀ ರಾಜ್ಯದಲ್ಲಿರತಕ್ಕಂಥ ಸಮಸ್ಯೆ. ಇಡೀ ರಾಜ್ಯದ ದೃಷ್ಟಿಯಿಟ್ಟುಕೊಂಡು ಯೋಚನೆ ಮಾಡಿ ಬಗೆಹರಿಸಬೇಕು. ನಾವು ಇದನ್ನು ಕಳೆದ ಐದು ವರ್ಷಗಳಿಂದ ಅನುಭವಿಸುತ್ತಿದ್ದೇವೆ. ಒಂದು ತಾಲ್ಲೂಕಿಗೆ ಡ್ರೈವ್ ಮಾಡಿ ಅಲ್ಲಿ ಈ ಸಮಸ್ಯೆ ಬಗೆಹರಿಯುತ್ತಿದ್ದಂತೆ ಇಡೀ ರಾಜ್ಯದ ಸಮಸ್ಯೆ ಬಗೆಹರಿಯುವುದಿಲ್ಲ. ಸಮಗ್ರವಾಗಿ ಯೋಚನೆ ಮಾಡಿ ಒಂದು ಕಾರ್ಯ ಯೋಜನೆ ರೂಪಿಸಬೇಕಾಗಿದೆ.

ಶ್ರೀ ನಾಡಗೌಡ ವೆಂಕಟರಾವ್ : ಅಣ್ಣಾ ನನ್ನದಾದರೂ ಬಗೆಹರಿಯಲಿ ನಡುವೆ ಕಲ್ಲು ಹಾಕಬೇಡ ಸ್ವಲ್ಪ ಕುಳಿತುಕೊಳ್ಳಿ. ನೀವು ಅದು ಬೇಡ ಇದು ಬೇಡ ಎಂದರೆ ಯಾವುದೂ ಆಗುವುದಿಲ್ಲ. ನೀನು ನಡುವೆ ಬಂದು ಕಲ್ಲು ಹಾಕಿ ಬಿಡುತ್ತಿಯಲ್ಲ.

ಶ್ರೀ ಯು.ಟಿ.ಖಾದರ್: ಒಂದೊಂದು ತಾಲ್ಲೂಕಿಗೆ ಒಂದೊಂದು ರೀತಿಯ ಸಮಸ್ಯೆಯಾಗುತ್ತದೆ.

ಅಧ್ಯಕ್ಷರು : ಆಯಿತು ಬಿಡಿ ತಾವು ಉತ್ತರಿಸಿ.

ಶ್ರೀ ಜಿ. ಕರುಣಾಕರ ರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರೇನು ತಮ್ಮ ರಾಯಚೂರು ಜಿಲ್ಲೆಯ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದಾರೆ, ಅಲ್ಲಿ ಪೆಂಡೆನ್ಸಿ ಇದೆ ಅದು ವಾಸ್ತವಾಂಶ. ಇಡೀ ರಾಜ್ಯದಲ್ಲಿ ಈ ಹುದ್ದೆಗಳ ಕೊರತೆಯನ್ನು ಪಟ್ಟಿ ಮಾಡಲಿಕ್ಕೆ ಸರ್ಕಾರ ಈಗಾಗಲೇ ಕ್ರಮ ಜರುಗಿಸುತ್ತಿದೆ. 1600 ಸರ್ವೇಯರ್ ಗಳನ್ನು ಸಿ.ಇ.ಟಿ. ಮಾದರಿಯಲ್ಲಿ ಮಾಡಿ ಮೆರಿಟ್ ಆಧಾರದ ಮೇಲೆ ಅಪಾಯಿಂಟ್ ಮಾಡಲಿಕ್ಕೆ ಎಲ್ಲಾ ಕ್ರಮಗಳನ್ನು ಜರುಗಿಸುತ್ತಿದ್ದೇವೆ. ಈಗಾಗಲೇ ವಿಶೇಷವಾಗಿ ರಾಯಚೂರು, ಸಿಂಧನೂರು, ಗಳಲ್ಲಿ ಹೆಚ್ಚಿನ ಬಾಕಿ ಇರುವುದರಿಂದ ವಿಶೇಷ ಡ್ರೈವ್ ಮಾಡಬೇಕೆಂದು ಅವರೇನು ಹೇಳಿದರು ಅದನ್ನು ನಾವು ಮಾಡುತ್ತೇವೆ. ಅಗತ್ಯ ಬಿದ್ದರೆ ನಾನೆ ತಮ್ಮ ಜಿಲ್ಲೆಗೆ ಬಂದು ರಿವ್ಯೂ ಮಾಡಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತೇವೆ.

ಶ್ರೀ ಸಿ.ಟಿ.ರವಿ : ನಮ್ಮ ಜಿಲ್ಲೆಗೂ ಬೇಟಿ ಕೊಡಿ.

ಶ್ರೀ ಯು.ಟಿ.ಖಾದರ್ : ನಮ್ಮ ಜಿಲ್ಲೆಗೂ ಬೇಟಿ ಕೊಡಿ.

ಶ್ರೀ ಜಿ.ಕರುಣಾಕರ ರೆಡ್ಡಿ : ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಮಾಡೋಣ. ತಾವುಗಳು ಹೇಳಿದ ಹಾಗೆ ಇಡೀ ರಾಜ್ಯದಲ್ಲಿ ಈ ಸಮಸ್ಯೆಯಿದೆ, ಇಲ್ಲವೆಂದು ನಾನು ಹೇಳಲಿಲ್ಲ. ಎಲ್ಲಿ ಹೆಚ್ಚಿನ ತೊಂದರೆಯಿದೆ, ಅಲ್ಲಿ ಮಾಡೋಣ.

ಜಮಖಂಡಿ ಮತ್ತು ಮುಧೋಳ ತಾಲ್ಲೂಕಿನಲ್ಲಿ ಸವುಳು ಜವುಳು ತೆಗೆಯುವುದು

23(364) ಶ್ರೀ ಸಿದ್ದುಸವದಿ (ತೇರದಾಳ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಮತ್ತು ಮುಧೋಳ ತಾಲ್ಲೂಕಿನಲ್ಲಿ ಬಿ.ಎಲ್.ಬಿ.ಸಿ. ಕಮಾಂಡ್ ಏರಿಯಾದಲ್ಲಿ ಹತ್ತಾರು ಸಾವಿರ ಎಕರೆ ಫಲವತ್ತಾದ ಜಮೀನು ಸವಳು-ಜವಳು ಬಿದ್ದು ಜಮೀನು ಬರಡಾಗುತ್ತಿರುವವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಸುಧಾರಣಾ ಕ್ರಮಕೈಗೊಳ್ಳಲಾಗಿದೆ. ಇಲ್ಲಿಯವರೆಗೆ ಎಷ್ಟು ಎಕರೆ ಜಮೀನು ಸವಳು-ಜವಳು ಮುಕ್ತವಾಗಿದೆ;

ಇ) ಉಳಿದ ಜಮೀನನ್ನು ಯಾವಾಗ ಮತ್ತು ಯಾವ ರೀತಿ ಸುಧಾರಣೆ ಮಾಡಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಂತಹ ಬಾಧಿತ ಜಮೀನುಗಳನ್ನು ತೆರೆದ ಬಸಿಗಾಲುವೆ ನಿರ್ಮಾಣ, ಅಂತರ್ಗತ ಬಸಿಗಾಲುವೆ ನಿರ್ಮಾಣ ಮತ್ತು ನೈಸರ್ಗಿಕ ನಾಲೆಗಳ ಅಗಲೀಕರಣ ಹಾಗೂ ಹೂಳೆತ್ತುವ ಕ್ರಮಗಳಿಂದ ಸುಧಾರಿಸಲಾಗುತ್ತಿದೆ. ಇಲ್ಲಿಯವರೆಗೆ (ಜನವರಿ 2011) ಅಂತರ್ಗತ ಬಸಿಗಾಲುವೆ ನಿರ್ಮಾಣದಿಂದ ಮುಧೋಳ ತಾಲ್ಲೂಕಿನಲ್ಲಿ 446.05 ಎಕರೆ (180.59 ಹೆ.) ಜಮೀನನ್ನು ಸವಳು-ಜವಳು ಮುಕ್ತಗೊಳಿಸಲಾಗಿದೆ.

ಇ) ಜಮಖಂಡಿ ತಾಲ್ಲೂಕಿನ 2068.32 ಎಕರೆ (836.46ಹೆ.) ಬಾಧಿತ ಕ್ಷೇತ್ರ ವ್ಯಾಪ್ತಿಯ ಮೀನಹಳ್ಳಿ ಅಗಲೀಕರಣ ಹಾಗೂ ಹೂಳು ತೆಗೆಯುವ ಕಾಮಗಾರಿಗೆ ಮಂಜೂರಾತಿ ದೊರೆತಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಅದೇ ರೀತಿ ಜಮಖಂಡಿ ತಾಲ್ಲೂಕಿನ ತೇರದಾಳ ಗ್ರಾಮದ 728.13 ಎಕರೆ